**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 673/2017**
**ಚಾಸಾ ಃ- 02 / ಪ್ರಾಸಾ ಃ- 03**

| | |
|---|---|
| ಹೆಸರು | **ಸೋಮಶೇಖರ್** |
| ತಂದೆಯ ಹೆಸರು | **ಬಸಪ್ಪ** |
| ವಯಸ್ಸು | **38** |
| ಉದ್ಯೋಗ | **ಕೂಲಿ ಕೆಲಸ** |
| ವಿಳಾಸ | **ಚೋಳನಾಯಕನಹಳ್ಳಿ** |

**ದಿನಾಂಕಃ 23-11-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ನಾನು 2016 ನೇ ಇಸವಿಯಲ್ಲಿ ರಾತ್ರಿ 10.30 ರ ಸಮಯದಲ್ಲಿ ನಾನು ಮತ್ತು ನನ್ನ ಅಣ್ಣ ಬೈಕ್‌ನಲ್ಲಿ ಸುಂಕದಕಟ್ಟೆ ಕಡೆಯಿಂದ ನಮ್ಮ ಊರಾದ ಚೋಳನಾಯಕನ ಹಳ್ಳಿ ಕಡೆಗೆ ಬರುತ್ತಿದ್ದಾಗ, ಲಕ್ಕುಪ್ಪೆ ಪೆಟ್ರೋಲ್ ಬಂಕ್ ಹತ್ತಿರ ಮಾಗಡಿ ಕಡೆಯಿಂದ ಬರುತ್ತಿದ್ದ ಇಂಡಿಕಾ ಕಾರ್ ವೇಗವಾಗಿ ಬಂದು ನಮ್ಮ ಮುಂದೆ ಹೋಗುತ್ತಿದ್ದ ರವಿ ಮತ್ತು ಸಂತೋಷ್ ರವರ ಬೈಕ್ ಗೆ ಡಿಕ್ಕಿ ಪಡಿಸಿತು. ಸದರಿ ಅಪಘಾತದಿಂದ ರವಿ ಕುಮಾರ್ ರವರು ಸ್ಥಳದಲ್ಲಿಯೇ ಮೃತ ಪಟ್ಟರು. ಸಂತೋಷ್ ರವರಿಗೆ ಏಟಾಗಿತ್ತು ಅವರು ಸಹ 10 ನೇ ತಾರೀಖಿನಂದು ಮೃತಪಟ್ಟರು.

ಸದರಿ ಅಪಘಾತಕ್ಕೆ ಆರೋಪಿಯೇ ಕಾರಣ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿದ್ದಾರೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ನನಗೆ ಇಂಡಿಕಾ ಕಾರ್ ಮತ್ತು ದ್ವಿಚಕ್ರವಾಹನದ ಸಂಖ್ಯೆ ಗೊತ್ತಿಲ್ಲ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ಮಾಗಡಿ ಕಾರಿನ ಕಡೆಯಿಂದ ಬರುತ್ತಿದ್ದ ಕಾರಿನ ಸಂ. ಕೆಎ-53-ಬಿ-2774 ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ದ್ವಿಚಕ್ರವಾಹನಕ್ಕೆ ಸಂ. ಕೆಎ-41-ಇಇ-4638 ಗೆ ಡಿಕ್ಕಿಪಡಿಸಿತ್ತು ಎಂದರೆ ಸರಿ. ನಾನು ಪೋಲೀಸರ ಮುಂದೆ ಎರಡು ವಾಹನಗಳ ಸಂಖ್ಯೆಗಳನ್ನು ಹೇಳಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಃ- ಆರೋಪಿ ಪರ ಶ್ರೀ. ಎ.ಎಸ್.ಎಸ್, ವಕೀಲರಿಂದ ಃ-**

ಅಪಘಾತ ನಡೆದ ಸ್ಥಳದಿಂದ ನಾನು ಅರ್ಧ ಕಿ.ಮೀ ಕ್ಕಿಂತಲೂ ಹತ್ತಿರದಲ್ಲಿ ಇದ್ದೇನು. ನಾನು ಅಪಘಾತ ನಡೆದ ಸ್ಥಳಕ್ಕೆ ಬಂದು ನೋಡುವಷ್ಟರಲ್ಲಿ ಕೆಳಗೆ ಬಿದ್ದಿದ್ದರು. ರವಿ ಮತ್ತು ಸಂತೋಷ್ ರವರು ರಸ್ತೆಯ ಬಲಭಾಗದಲ್ಲಿ ಬಿದ್ದಿದ್ದರು. ಕಾರು ರಸ್ತೆಯ ಎಡಭಾಗದಲ್ಲಿ ಸ್ವಲ್ಪ ಮುಂದೆ ನಿಂತಿತ್ತು. ನಾನು ಅಪಘಾತ ನಡೆದ ಸ್ಥಳಕ್ಕೆ ಬಂದು ನೋಡುವಷ್ಟರಲ್ಲಿ ರವಿ ಮತ್ತು ಸಂತೋಷ್ ರವರು ಬಿದ್ದಿದ್ದರು, ಅವರ ಪೈಕಿ ರವಿಯವರು ಮೃತಪಟ್ಟಿದ್ದರು ಮತ್ತು ಸಂತೋಷ್ ರವರನ್ನು ಸಂತೈಸಿ ಆಂಬುಲೆನ್ಸ್ ನಲ್ಲಿ ಕಳುಹಿಸಿಕೊಟ್ಟೆವು. ನನಗೆ ಮಾನ್ಯ ಎ. ಪಿ. ಪಿಯವರು ಹೇಳಿದಾಗ ಮಾತ್ರ ಕಾರು ಮತ್ತು ದ್ವಿಚಕ್ರವಾಹನದ ಸಂಖ್ಯೆ ಗೊತ್ತಾಯಿತು ಎಂದರೆ ಸರಿ. ರವಿಯವರು ನನ್ನ ಹೆಂಡತಿಯ ಅಕ್ಕನ ಮಗನಾಗಿರುತ್ತಾರೆ. ಪ್ರಾಸಾ-2 ರವರು

ನನ್ನ ಬಾವ ಎಂದರೆ ಸರಿ. ಫ್ರಾಸಾ-2 ರವರು ನನ್ನ ಬಾವನಾದ ಕಾರಣದಿಂದ ಅವರು ಹೇಳಿದ ಮೇರೆಗೆ ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಾನು



ಅಪಘಾತವನ್ನು ನೋಡಿರುವುದಾಗಿ ನುಡಿದಿರುತ್ತಾರೆ. ನಾನು ಯಾವುದೇ ಅಪಘಾತವನ್ನು ನೋಡದೇ ಇದ್ದರೂ ಸಹ ಫ್ರಾಸಾ-2 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ನೋಡದೇ ಇರುವ ಕಾರಣದಿಂದ ಕಾರಿನ ಚಾಲಕರು ಅತಿವೇಗ ಮತ್ತು ಅಜಾಗರೂಕತೆಯಿಂದ ವಾಹನವನ್ನು ಚಾಲನೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅಪಘಾತವನ್ನು ನೋಡದೇ ಇರುವ ಕಾರಣದಿಂದ ಕಾರಿನ ಚಾಲಕನು ಅತಿವೇಗವಾಗಿ ಚಾಲನೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**